## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.22/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಅಬಕಾರಿ ಪೊಲೀಸ್

-ಃಃ ವಿರುದ್ಧ ಃಃ-

ಆರೋಪಿ ನಂ 1. ಸಾಬಯ್ಯಾ ತಂದೆ ಬೀಮಯ್ಯಾ ಕಲಾಲ,
ವಃ 40 ವರ್ಷ, ಉಃ ಕೂಲಿ ಕೆಲಸ,
ಸಾಃ ಕೋಡ್ಲಾ, ತಾಃ ಸೇಡಂ,
ಜಿಃ ಕಲಬುರಗಿ .

2. ಸಾವಿತ್ರಮ್ಮ ಗಂಡ ಸಾಬಣ್ಣ ಕಲಾಲ,
ವಃ --, ಉಃ ಮನೆಗೆಲಸ,
ಸಾಃ ಕೋಡ್ಲಾ, ತಾಃ ಸೇಡಂ,
ಜಿಃ ಕಲಬುರಗಿ .

----

**ದೋ ಷಾ ರೋ ಪ ಣೆ**

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿಎ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 16-08-2019 ರಂದು ಸಂಜೆ 06.30 ಗಂಟೆ ಸುಮಾರಿಗೆ ಚಾ. ಸಾ. 1 ರವರು ಸಿಬ್ಬಂದಿಯವರೊಂದಿಗೆ ಮತ್ತು ಪಂಚರೊಂದಿಗೆ ಸೇಡಂ ತಾಲೂಕಿನ ಕೊಡ್ಲಾ ಗ್ರಾಮದ 1 ನೇ ಆರೋಪಿತರಿಗೆ ಸೇರಿದ ಮನೆಯಲ್ಲಿ ಅಬಕಾರಿ ದಾಳಿ ಮಾಡಿದಾಗ ಸದರಿ ಸ್ಥಳದಲ್ಲಿ 3 ಪ್ಲಾಸ್ಟಿಕ್ ಕೊಡದಲ್ಲಿ ತಲಾ 10 ರಂತೆ ಒಟ್ಟು 30 ಲೀಟರ್ ಕಲಬೆರಕೆ ಸೇಂದಿ ಇರುವುದು ಕಂಡು ಬಂದಿದ್ದು, ಅದು ಸೇವನೆ ಮಾಡಿದಲ್ಲಿ ಮಾನವ ದೇಹಕ್ಕೆ ಯೋಗ್ಯವಲ್ಲದ ಕಲಬೆರಕೆ ಸೇಂದಿ ಆಗಿದ್ದು ಚಾಸಾ-1 ಹಾಗೂ ಸಿಬ್ಬಂದಿ ಪಂಚಜನರ ಸಮಕ್ಷಮದಲ್ಲಿ ದಾಳಿ ಮಾಡಿ ಜಪ್ತಿ ಪಡಿಸಿಕೊಂಡಿದ್ದು, ಆರೋಪಿ ನಂ 2 ಆದ ನೀವು ಸದರಿ ಮನೆಯ ಯಜಮಾನನಾಗಿದ್ದು ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಮತ್ತು 38 ಎ ಹಾಗೂ ಭಾ. ದಂ. ಸಂಹಿತೆ ಕಲಂ 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 30-03-2024 ಪ್ರ.ದ.ನ್ಯಾದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.22/2021**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಅಬಕಾರಿ ಪೊಲೀಸ್

-ಃಃ ವಿರುದ್ಧ ಃಃ-

ಆರೋಪಿಃ- ಸಾಬಯ್ಯಾ ತಂದೆ ಬೀಮಯ್ಯಾ ಕಲಾಲ,
ವಃ 40 ವರ್ಷ, ಉಃ ಕೂಲಿ ಕೆಲಸ,
ಸಾಃ ಕೋಡ್ಲಾ, ತಾಃ ಸೇಡಂ,
ಜಿಃ ಕಲಬುರಗಿ ಮತ್ತು ಇತರರು.

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

(ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು,
ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 30-03-2024 ಪ್ರ.ದ.ನ್ಯಾದಂ. ಸೇಡಂ.